# All India Radio: Bangalore
# National Bulletin In Kannada
# 22.05.2025  1.10 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**22.05.2025  1.10 p.m.**

**<><><><>**

ಮುಖ್ಯಾಂಶಗಳು

1. ಪಾಕಿಸ್ತಾನದ ಅಸಲಿ ಮುಖ ಅನಾವರಣ :  ಭಾರತಕ್ಕೆ ಭಯೋತ್ಪಾದನೆ ವಿರುದ್ಧ ಜಾಗತಿಕ ಬೆಂಬಲ : ಪ್ರಧಾನಿ ನರೇಂದ್ರ ಮೋದಿ
2. ಭಾರತೀಯ ರೈಲ್ವೆಯಲ್ಲಿ ೪೦ ಸಾವಿರ ಕಿಲೋ ಮೀಟರ್ ವಿದ್ಯುದ್ದೀಕರಣ ಪೂರ್ಣ  : ಸಚಿವ ಪ್ರಹ್ಲಾದ್ ಜೋಷಿ
3. ಪಾಕಿಸ್ತಾನದಲ್ಲಿನ ಭಯೋತ್ಪಾದಕ ಗುರಿಗಳ ವಿರುದ್ಧ ಭಾರತ ಸ್ವಯಂ ರಕ್ಷಣಾ ಕ್ರಮ ಕೈಗೊಂಡಿರುವುದು ಸಮರ್ಥನೀಯ : ಅಮೆರಿಕ ಪ್ರತಿಕ್ರಿಯೆ
4. ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ :  ಭಾರತದ ಕಿಡಂಬಿ ಶ್ರೀಕಾಂತ್ ಮತ್ತು ಮಿಶ್ರ ಡಬಲ್ಸ್ ಜೋಡಿ ಕ್ವಾರ್ಟರ್ ಫೈನಲ್ಸ್ ಗೆ

**<><><><>**

ದೇಶದಲ್ಲಿ ಕಾಮಗಾರಿ ಪೂರ್ಣಗೊಂಡ ಕರ್ನಾಟಕದ ೫ ರೈಲ್ವೆ ನಿಲ್ದಾಣಗಳು ಸೇರಿದಂತೆ ದೇಶದ ೧೦೩ ರೈಲ್ವೆ ನಿಲ್ದಾಣಗಳನ್ನು ಪ್ರಧಾನಿ ನರೇಂದ್ರ ಮೋದಿ ಇಂದು ವರ್ಚುವಲ್ ಮೂಲಕ ಲೋಕಾರ್ಪಣೆ ಮಾಡಿದರು. ೧೮ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ೮೬ ಜಿಲ್ಲೆಗಳಲ್ಲಿ ಈ ರೈಲ್ವೈ ನಿಲ್ದಾಣಗಳನ್ನು ಒಂದು ಸಾವಿರದ ನೂರು ಕೋಟಿ ರೂಪಾಯಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ರಾಜಸ್ಥಾನದ ಬಿಕೇನರ್ ನಲ್ಲಿ ನಡೆದ ಸಮಾರಂಭದಲ್ಲಿ ಅವರು ಅಭಿವೃದ್ಧಿಪಡಿಸಿದ ನೂತನ ರೈಲ್ವೆ ನಿಲ್ದಾಣಗಳನ್ನು ಸಾರ್ವಜನಿಕ ಸೇವೆಗೆ ಸಮರ್ಪಿಸಿದರು.  ನೈರುತ್ಯ ರೈಲ್ವೆ ವಿಭಾಗದ ಧಾರವಾಡ, ಗದಗ, ಬಾಗಲಕೋಟೆ, ಗೋಕಾಕ ಮತ್ತು ಮುನಿರಾಬಾದ್ ಸೇರಿದಂತೆ ವಿವಿಧ ರೈಲ್ವೆ ನಿಲ್ದಾಣಗಳನ್ನು ಅಮೃತ ಭಾರತ ಸ್ಟೇಷನ್ ಯೋಜನೆಯಡಿ ಪುನಾರಾಭಿವೃದ್ಧಿಗೊಳಿಸಲಾಗಿದೆ. ಪ್ರಧಾನಿ ನರೇಂದ್ರಮೋದಿ ಮಾತಾನಾಡಿ, ನಮ್ಮ ದೇಶದ ವಿಮಾನ ನಿಲ್ದಾಣಗಳು, ಬಂದರುಗಳು ಅಭಿವೃದ್ಧಿಗೊಂಡಿವೆ. ಇದೇ ರೀತಿಯಲ್ಲಿ ರೈಲ್ವೆ ನಿಲ್ದಾಣಗಳು ಸಹ ಪುನಶ್ಚೇತನಗೊಳ್ಳುತ್ತಿವೆ. ಹಿಂದಿನ

ಸರ್ಕಾರಕ್ಕೆ ಹೋಲಿಸಿದರೆ ನಾವು ಆರು ಪಟ್ಟು ಹೆಚ್ಚು ಹಣವನ್ನು ರೈಲ್ವೆ ಅಭಿವೃದ್ಧಿಗೆ ಬಳಸುತ್ತಿದ್ದೇವೆ. ವಂದೇಭಾರತ್, ನಮೋ ಭಾರತ್ ರೈಲುಗಳು ಆಧುನಿಕತೆಯ ಪ್ರತೀಕವಾಗಿವೆ. ರೈಲ್ವೆ ಮೂಲ ಸೌಕರ್ಯ ಹೆಚ್ಚಿಸಿದ್ದು, ಮಾನವ ರಹಿತ ರೈಲ್ವೆ ಕ್ರಾಸಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಿದ್ದೇವೆ. ಬುಲೆಟ್ ರೈಲು ಸೇವೆಗೆ ಒಂದು ವರ್ಷದಲ್ಲಿ ಚಾಲನೆ ನೀಡಲಾಗುವುದು ಎಂದು ಪ್ರಧಾನಿ ಹೇಳಿದರು.

ಧ್ವನಿ: ಪ್ರಧಾನಿ ನರೇಂದ್ರಮೋದಿ

ದೇಶದಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ನಿರಂತರವಾಗಿ ಸಾಗುತ್ತಿದ್ದು ಇದರಿಂದ ಉದ್ಯೋಗವಕಾಶಗಳು ಹೆಚ್ಚಾಗಿವೆ. ರಾಜಸ್ಥಾನಕ್ಕೆ ವಿಶೇಷ ಒತ್ತು ನೀಡಿ ಅಭಿವೃದ್ಧಿಗೊಳಿಸಲಾಗುತ್ತಿದೆ. ದೆಹಲಿ-ಮುಂಬೈ ಎಕ್ಸ್‌ಪ್ರೆಸ್ ಹೆದ್ದಾರಿ ಯೋಜನೆಯ ಕಾಮಗಾರಿ ರಾಜಸ್ಥಾನ ಭಾಗದಲ್ಲಿ ಪೂರ್ಣಗೊಂಡಿದೆ. ಸೂರ್ಯಘರ್ ಯೋಜನೆಯಿಂದ ಉಚಿತ ವಿದ್ಯುತ್ ದೊರೆಯುತ್ತಿದೆ ಎಂದರು. ಪೆಹಲ್ಗಾಮ್ ಭಯೋತ್ಪಾದಕ ದಾಳಿಗೆ ಭಾರತದ ವೀರಯೋಧರು ನೀಡಿದ ಉತ್ತರಕ್ಕೆ ಪ್ರದಾನಿ ನರೇಂದ್ರಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು. ಭಯೋತ್ಪಾದಕರು ನಮ್ಮ ಮಹಿಳೆಯರ ಸಿಂದೂರವನ್ನು ಅಳಿಸಿದ್ದರು ಅವರಿಗೆ ಸೂಕ್ತ ಪ್ರತ್ಯುತ್ತರ ನೀಡಲಾಗಿದೆ. ದೇಶದ ಜನ ನಮಗೆ ಸಂಕಲ್ಪದ ಬಲ ನೀಡಿದ್ದರು. ಸೇನೆ ತನ್ನ ಶೌರ್ಯದ ಮೂಲಕ ಭಯೋತ್ಪಾದಕರ ೯ ನೆಲೆಗಳನ್ನು ಧ್ವಂಸಗೊಳಿಸಿದ್ದೇವೆ. ಐದು ವರ್ಷಗಳ ಹಿಂದೆ ಬಾಲಕೋಟ್ ನಲ್ಲಿ ವಾಯುದಾಳಿ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗಿತ್ತು ಎಂದು ಪ್ರಧಾನಿ ನರೇಂದ್ರಮೋದಿ ಹೇಳಿದರು. ಭಯೋತ್ಪಾದನೆಗೆ ನಮ್ಮದು ಇದೇ ಉತ್ತರ, ಇದೇ ರೀತಿಯ ನೀತಿಯಾಗಿದೆ. ಪಾಕಿಸ್ತಾನದ ಅಸಲಿ ಮುಖ ಜಗತ್ತಿನ ಎದುರು ಅನಾವರಣಗೊಂಡಿದೆ. ಭಾರತಕ್ಕೆ ಭಯೋತ್ಪಾದನೆ ವಿರುದ್ಧ ಜಾಗತಿಕ ಬೆಂಬಲ ದೊರೆತಿದೆ ಎಂದರು. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಾತಾನಾಡಿ, ಪ್ರಧಾನಿ ನರೇಂದ್ರಮೋದಿ ನೇತೃತ್ವದ ಸರ್ಕಾರ ರೈಲ್ವೆ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದೆ. ರೈಲ್ವೆ ವಲಯಕ್ಕೆ ಹೊಸ ಸ್ವರೂಪ ಮತ್ತು ಹೊಸ ಸ್ಪರ್ಶ ನೀಡಿದೆ ಎಂದು ತಿಳಿಸಿದ್ದಾರೆ.

ಧ್ವನಿ : ಅಶ್ವಿನಿ ವೈಷ್ಣವ್

<><><><>

ಅಮೃತ ಯೋಜನೆಯಡಿಯಲ್ಲಿ ೨೪ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪುನರ್ ನಿರ್ಮಾಣಗೊಂಡ ಗದಗ ರೇಲ್ವೆ ನಿಲ್ದಾಣವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಇದೇ ವೇಳೆ

ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ರೇಲ್ವೆ ಇಲಾಖೆಗೆ ಕಾಯಕಲ್ಪ ನೀಡಿದ ಫಲವಾಗಿ ಭಾರತೀಯ ರೈಲ್ವೆಯ ೪೦ ಸಾವಿರ ಕಿಲೋ ಮೀಟರ್ ವಿದ್ಯುದ್ದೀಕರಣ ಪೂರ್ಣಗೊಂಡಿದೆ ಎಂದು ತಿಳಿಸಿದರು.

ಧ್ವನಿ: ಪ್ರಹ್ಲಾದ್ ಜೋಷಿ

<><><><>

ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿಯ ಬಳಿಕ ಪಾಕಿಸ್ತಾನದಲ್ಲಿನ ಭಯೋತ್ಪಾದಕ ಗುರಿಗಳ ವಿರುದ್ಧ ಭಾರತವು ಸ್ವಯಂ ರಕ್ಷಣಾ ಕ್ರಮ ಕೈಗೊಂಡಿರುವುದು ಸಮರ್ಥನೀಯ ಎಂದು ಅಮೆರಿಕದ ಮಾಜಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಜಾನ್ ಬೋಲ್ಟನ್ ಹೇಳಿದ್ದಾರೆ. ಖಾಸಗಿ ಸುದ್ದಿ ವಾಹಿನಿಯೊಂದಕ್ಕೆ ಮಾತನಾಡಿದ ಅವರು ಪಾಕಿಸ್ತಾನವು ತನ್ನ ಗಡಿಯೊಳಗೆ ಭಯೋತ್ಪಾದಕ ಚಟುವಟಿಕೆಗಳನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದು ಸೂಚಿಸಿದ್ದಾರೆ. ಇಲ್ಲವಾದರೆ ಮುಂಬರುವ ದಿನಗಳಲ್ಲಿ ಗಂಭೀರ ಪರಿಣಾಮಗಳಿಗೆ ಕಾರಣವಾಗಬಹುದು ಎಂದು ಎಚ್ಚರಿಸಿದ್ದಾರೆ. ಪಾಕಿಸ್ತಾನದಲ್ಲಿ ಹೆಚ್ಚುತ್ತಿರುವ ಚೀನಾದ ಪ್ರಭಾವ ಬಗ್ಗೆಯೂ ಅವರು ಕಳವಳ ವ್ಯಕ್ತಪಡಿಸಿದ್ದಾರೆ.ಪಾಕಿಸ್ತಾನಕ್ಕೆ ಚೀನಾದ ಮಿಲಿಟರಿ ವಿಮಾನಗಳ ಪೂರೈಕೆ ಭಾರತದ ವಿರುದ್ಧ ಬೆದರಿಕೆಯ ಭಾಗ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

<><><><>

ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯನ್ನು ಮತ್ತಷ್ಟು ಅನಾವರಣಗೊಳಿಸುವ ಭಾರತದ ಆಕ್ರಮಣಕಾರಿ ಜಾಗತಿಕ ಅಭಿಯಾನದಡಿಯಲ್ಲಿ ಎರಡು ಸಂಸದೀಯ ನಿಯೋಗಗಳು ತಮ್ಮ ನಿಗದಿತ ಪ್ರವಾಸದಲ್ಲಿ ತೊಡಗಿವೆ. ಜೆಡಿಯು ಸಂಸದ ಸಂಜಯ್ ಕುಮಾರ್ ಝಾ ನೇತೃತ್ವದ ಸರ್ವಪಕ್ಷ ಸಂಸದೀಯ ನಿಯೋಗ ಜಪಾನ್ ತಲುಪಿದ್ದು, ಜಪಾನ್‌ನ ಭಾರತೀಯ ರಾಯಭಾರಿ ಸಿಬಿ ಜಾರ್ಜ್ ಅವರನ್ನು ಭೇಟಿ ಮಾಡಿತು. ಜಪಾನ್‌ಗೆ ಬಂದ ನಂತರ ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಸಂಸದ ಸಂಜಯ್ ಕುಮಾರ್ ಝಾ ಅವರು ಗಡಿಯಾಚೆಗಿನ ಭಯೋತ್ಪಾದನೆಯ ವಿರುದ್ಧ ಭಾರತದ ನಿಲುವಿನಲ್ಲಿ ನಿಯೋಗವು ನಿರಂತರ ಬೆಂಬಲವನ್ನು ಬಯಸುತ್ತಿದೆ ಎಂದು ಹೇಳಿದ್ದಾರೆ. ಶಿವಸೇನಾ ಸಂಸದ ಶ್ರೀಕಾಂತ್ ಶಿಂಧೆ ನೇತೃತ್ವದ ಮತ್ತೊಂದು ನಿಯೋಗ ಯುಎಇಗೆ ತಲುಪಿದೆ. ಎಲ್ಲಾ ರೀತಿಯ ಭಯೋತ್ಪಾದನೆಯನ್ನು ಎದುರಿಸುವ ನವದೆಹಲಿಯ ಸಂಕಲ್ಪವನ್ನು ದೃಢೀಕರಿಸಲು ನಿಯೋಗವು ಲೈಬೀರಿಯಾ, ಕಾಂಗೋ ಮತ್ತು ಸಿಯೆರಾ ಲಿಯೋನ್‌ಗೆ ಭೇಟಿ

ನೀಡಲಿದೆ. ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಯ ಬಲವಾದ ಭಾರತದ ಸಂದೇಶವನ್ನು ನಿಯೋಗಗಳು ಹೊತ್ತೊಯ್ದಿವೆ.

<><><>

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್, ಕೂಪನ್ ಹೇಗನ್ ನಲ್ಲಿ ನಿನ್ನೆ ಡೆನ್ಮಾರ್ಕ್ ನ ಕೈಗಾರಿಕೆ, ವಾಣಿಜ್ಯ ಮತ್ತು ಹಣಕಾಸು ವ್ಯವಹಾರಗಳ ಸಚಿವ ಮಾರ್ಟಿನ್ ಬೊಡೋಸ್ಕೊವ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು. ಉಭಯ ನಾಯಕರು, ಸಹಕಾರ ಸಂಬಂಧಗಳ ಬಲವರ್ಧನೆ ಹಾಗೂ ಹೊಸ ವಲಯಗಳಲ್ಲಿ ಸಂಬಂಧಗಳ ಅಭಿವೃದ್ಧಿ ಕುರಿತಂತೆ ಚರ್ಚೆ ನಡೆಸಿದರು. ಡಾ. ಎಸ್. ಜೈಶಂಕರ್, ಡೆನ್ಮಾರ್ಕ್ ನ ಸ್ಪೀಕರ್ ಸೊರೇನ್ ಗದೆ ಅವರನ್ನೂ ಸಹ ಭೇಟಿ ಮಾಡಿದರು. ಈ ಕುರಿತು ತಮ್ಮ ಸಾಮಾಜಿಕ ಜಾಲತಾಣದಲ್ಲಿ ವಿವರ ಹಂಚಿಕೊಂಡಿರುವ ಅವರು, ಭಾರತ-ಡೆನ್ಮಾರ್ಕ್ ನಡುವಿನ ಸುಸ್ಥಿರ ಸಂಬಂಧಗಳಿಗೆ, ತನ್ನದೇ ಆದ ಮೌಲ್ಯವಿದೆ ಮತ್ತು ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಭಾರತದ ಬದ್ಧತೆಗೆ, ಡೆನ್ಮಾರ್ಕ್ ಬೆಂಬಲ ನೀಡುವುದಾಗಿ ತಿಳಿಸಿದೆ ಎಂದು ಹೇಳಿದ್ದಾರೆ.

<><><>

ಬಾಂಗ್ಲಾದೇಶ ಸೇನಾ ಮುಖ್ಯಸ್ಥ ಜನರಲ್ ವಕರ್-ಉಜ್-ಜಮಾನ್ ಅವರು ಮುಂದಿನ ಸಾರ್ವತ್ರಿಕ ಚುನಾವಣೆಯನ್ನು ಈ ವರ್ಷದ ಡಿಸೆಂಬರ್ ವೇಳೆಗೆ ನಡೆಸಬೇಕು ಎಂದು ಹೇಳಿದ್ದಾರೆ. ಚುನಾವಣೆಗಳ ಬಗ್ಗೆ ತಮ್ಮ ನಿಲುವು ಬದಲಾಗಿಲ್ಲ ಮತ್ತು ದೇಶದ ಭವಿಷ್ಯದ ಹಾದಿಯನ್ನು ನಿರ್ಧರಿಸುವುದು ಚುನಾಯಿತ ಸರ್ಕಾರದ ಹಕ್ಕು ಎಂದು ಢಾಕಾ ಕಂಟೋನ್ಮೆಂಟ್‌ನಲ್ಲಿ ನಿನ್ನೆ ಈ ವಿಷಯ ತಿಳಿಸಿದ್ದಾರೆ.

<><><>

ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಜಿಲ್ಲೆಯ ಸಿಂಗ್ಪೋರಾ ಚತ್ರೂ ಅರಣ್ಯ ಪ್ರದೇಶದಲ್ಲಿಂದು ಭದ್ರತಾ ಪಡೆ ಮತ್ತು ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆದಿದೆ. ನಿರ್ದಿಷ್ಟ ಮಾಹಿತಿಯ ಮೇರೆಗೆ ಶಾರಿ ಮತ್ತು ಮಂದ್ರಲ್ ಧೋಕ್ ಪ್ರದೇಶದ ನಡುವಿನ ಅರಣ್ಯ ಪ್ರದೇಶದಲ್ಲಿ ಪೊಲೀಸ್ ಮತ್ತು ಸೇನೆಯ ಜಂಟಿ ತಂಡವು ಸುತ್ತುವರಿದು ಶೋಧ ಕಾರ್ಯಾಚರಣೆ ನಡೆಸಿದೆ.

<><><>

ಕೌಲಾಲಂಪುರದಲ್ಲಿ ನಡೆಯುತ್ತಿರುವ ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಕಿಡಂಬಿ ಶ್ರೀಕಾಂತ್ ಮತ್ತು ಮಿಶ್ರ ಡಬಲ್ಸ್ ಜೋಡಿ ಧ್ರುವ್ ಕಪಿಲಾ ಹಾಗೂ ತನಿಶಾ ಕ್ರಾಸ್ಟೊ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದಿದ್ದಾರೆ. ಪುರುಷರ ಸಿಂಗಲ್ಸ್ ಪ್ರಿ-ಕ್ವಾರ್ಟರ್ ಫೈನಲ್ಸ್ ನಲ್ಲಿ,

ಶ್ರೀಕಾಂತ್ ಐರ್ಲೆಂಡ್‌ನ ನಾಟ್ ನ್ಗುಯೆನ್ ಅವರನ್ನು ೨೩-೨೧, ೨೧-೧೭ ರ ಅಂತರದಿಂದ ಸೋಲಿಸಿದ್ದಾರೆ. ಮಿಶ್ರ ಡಬಲ್ಸ್‌ನಲ್ಲಿ, ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಫ್ರಾನ್ಸ್‌ನ ಜೂಲಿಯನ್ ಮೈಯೊ ಮತ್ತು ಲಿಯಾ ಪಲೆರ್ಮೊ ಅವರನ್ನು ರೋಚಕ ಮೂರು ಗೇಮ್‌ಗಳ ಪಂದ್ಯದಲ್ಲಿ ೨೧-೧೭, ೧೮-೨೧, ೨೧-೧೫ ಅಂತರದಲ್ಲಿ ಸೋಲಿಸಿ ಕೊನೆಯ ಎಂಟರ ಘಟ್ಟದಲ್ಲಿ ಸ್ಥಾನ ಪಡೆದರು. ಮತ್ತೊಂದು ಪುರುಷರ ಸಿಂಗಲ್ಸ್ ಪ್ರಿ-ಕ್ವಾರ್ಟರ್ ಫೈನಲ್‌ನಲ್ಲಿ, ಆಯುಷ್ ಶೆಟ್ಟಿ ಫ್ರಾನ್ಸ್‌ನ ಟೋಮಾ ಪೊಪೊವ್ ವಿರುದ್ಧ ೧೩-೨೧, ೧೭-೨೧ ಅಂತರದಲ್ಲಿ ಪರಾಭವಗೊಂಡರು. ಭಾರತದ ಮತ್ತೋರ್ವ ಆಟಗಾರ ಸತೀಶ್ ಕರುಣಾಕರನ್ ಕೂಡ ೧೪-೨೧, ೧೯-೨೧ರ ಅಂತರದಿಂದ ಫ್ರಾನ್ಸ್‌ನ ಕ್ರಿಸ್ಟೋ ಪೊಪೊವ್ ವಿರುದ್ಧ ಸೋತು ಸ್ಪರ್ಧೆಯಿಂದ ನಿರ್ಗಮಿಸಿದರು.

<><><><>

ಐಪಿಎಲ್ ಟಿ೨೦ ಕ್ರಿಕೆಟ್ ಟೂರ್ನಿಯಲ್ಲಿಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಆತಿಥೇಯ ಗುಜರಾತ್ ಟೈಟಾನ್ಸ್ - ಲಕ್ನೋ ಸೂಪರ್ ಜೈಂಟ್ಸ್ ಮುಖಾಮುಖಿಯಾಗಲಿವೆ. ಪಂದ್ಯ ಈ ರಾತ್ರಿ ೦೭:೩೦ ಕ್ಕೆ ಆರಂಭವಾಗಲಿದೆ.

<><><><>

ಐರ್ಲೆಂಡ್ ನ ದುಬ್ಲಿನ್ ನಲ್ಲಿ ನಡೆಯುತ್ತಿರುವ ಐರಿಶ್ ಓಪನ್ ಸ್ಕ್ವಾಷ್ ಟೂರ್ನಿಯಲ್ಲಿ ಭಾರತದ ಆಕಾಂಕ್ಷ ಸುಲುಂಖೆ ಕ್ವಾರ್ಟರ್ ಫೈನಲ್ಸ್ ನಲ್ಲಿ ತನ್ನ ಅಭಿಯಾನ ಮುಂದುವರೆಸಲಿದ್ದಾರೆ. ಇಂದು ರಾತ್ರಿ ನಡೆಯಲಿರುವ ಪಂದ್ಯದಲ್ಲಿ ಅವರು ನಾರ್ವೆಯ ಮದೆಲೈನಿ ಹೈಲ್ಯಾಂಡ್ ಅವರನ್ನು ಎದುರಿಸಲಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>